ಹಾಯುದ್ದ ಹೋಗುವ ವಾಹನಗಳ ಮೇಲೆ ಕಲ್ಲು ತೂರುತ್ತಾರೆ. ಗಣವಂತಿ ಗ್ರಾವಂದಲ್ಲಿ ಈ ರೀತಿ ಆಗಾಗ ನಡೆಯುತ್ತಾ ಇರುತ್ತದೆ ಅಲ್ಲಿ ಒಬ್ಬರು ಗೂಡಾಗುರು ಇದ್ದಾರೆ ಅವರು ನನ್ನನ್ನು ಕೊಲೆ ಮಾಡುವುದಕ್ಕೆ ಈ ರೀತಿ ಸಂಚು ಮಾಡಿದರು ಎಂದು ಕಾಣುತ್ತದೆ. ಇನ್ನೊಂದು ವಂಖ್ಯೆ ವಿಚಾರ ಎಂದರೆ, ಪೋಲೀಸರು ಸಾಕಷ್ಟು ಬಿಗಿಯಾದ ಕ್ರಮವನ್ನು ಆ ಗ್ರಾಮದಲ್ಲಿ ಕೈಗೊಳ್ಳುತ್ತಾ ಇಲ್ಲ. ಹಿಂದೆ ಕುಮುಟಾದ ಅಸಿಸ್ಟೆಂಟ್ ಕಮಿಷನರ್ ಅವರು ಆ ದಾರಿಯಲ್ಲಿ ಹೋಗುತ್ತಿದ್ದಾಗ ಅವರ ಜೀಪ್ ಮೇಲೂ ಅವರು ಕಲ್ಲುಗಳನ್ನು ತೂರಿದ್ದಾರೆ. ಈ ಗ್ರಾಮ ರಾಷ್ಟ್ರೀಯ ಹೆದ್ದಾರಿಯಲ್ಲಿದ್ದು ಇಲ್ಲಿ ಆಗಾಗ ಗಲಾಟೆ ಆಗುತ್ತಾ ಇರುತ್ತದೆ' ಆ ದಾರಿಯಲ್ಲಿ ಭಟ್ಕಳಕ್ಕೆ ದಿವಸ ಬಿಟ್ಟು ದಿವಸ ಹೋಗ ಬೇಕಾಗಿರುತ್ತದೆ. ಹಾಗೂ ಆ ದಾರಿಯಲ್ಲಿ ಹೋಗುವಾಗ ನಮ್ಮ ಜೀವಕ್ಕೆ ಅಪಾಯವಿದೆ. ನಮ್ಮ ಜೀವಕ್ಕೆ ಅಪಾಯ ಆಗದ ರೀತಿಯಲ್ಲಿ ನೋಡಿಕೊಳ್ಳುವ ಬಗ್ಗೆ ಮಾನ್ಯ ಮಂತ್ರಿಗಳು ಭರವಸೆ ಕೊಡಬೇಕು. ಹಾಗೂ ಮಾನ್ಯ ಮುಖ್ಯ ಮಂತ್ರಿಗಳ ಸಮಾಜಕ್ಕೆ ಸೇರಿದ ಜನ ಕೂಡಾ ಸುತ್ತ ಮುತ್ತ ಅಲ್ಲಿ ಇದ್ದಾರೆ. ಇದರಿಂದ ಅವರಿಗೂ ಬಹಳ ಕಷ್ಟ ಇದೆ. ಈ ರೀತಿ ಗೂಂಡಾಗಿರಿ ಅಲ್ಲಿ ನಡೆಯುತ್ತಿದೆ. ಹಾಗೂ ಅಲ್ಲಿ ನನ್ನ ಜೀವಕ್ಕೆ ರಕ್ಷಣೆ ಬೇಕು. ಆ ರೀತಿ ಅಲ್ಲಿ ಏಕೆ ಕಲ್ಲು ಹೊಡೆಯುತಿದ್ದಾರೆ? ಅಲ್ಲಿ ನನ್ನ ಕೊಲೆ ಮಾಡುವ ಸಂಚು ಇತ್ತೇನೋ ಎಂದು ನನಗನ್ನಿಸುತ್ತಿದೆ. ಈ ಬಗ್ಗೆ ವಿಚಾರ ಮಾಡದೇ ಹೋದರೆ ಅಲ್ಲಿ ಸುತ್ತಮುತ್ತ ಶಾಂತಿ ಭಂಗವಾಗುತ್ತದೆ. ಈಗ ನನಗೆ ಏನು ಆಗಬೇಕಾಗಿದೆ ಎಂದರೆ...

ಅಧ್ಯಕ್ಷರು —ನಿಮಗೆ ರಕ್ಷಣೆ ಸಿಗಬೇಕು, ಹಾಗೂ ಬಂದೋಬಸ್ತ್ ಆಗಬೇಕು.

ಶ್ರೀ ಆರ್. ಎನ್, ನಾಯಕ್.—ಅಲ್ಲಿ ಶಾಂತಿ ಭಂಗ ಆಗಬಾರದು. ಅಲ್ಲಿ ಸರಿಯಾದಂತಹ ಎನ್‌ಕ್ವೈರಿ ಆಗಬೇಕು. ಆದ್ದರಿಂದ ಕಾರವಾರದ ಎಸ್.ಪಿ, ಅಥವಾ ಅವರಿಗಿಂತಾ ಉನ್ನತ ಮಟ್ಟದ ಅಧಿಕಾರಿಗಳಿಂದ ಈ ಬಗ್ಗೆ ವಿಚಾರಣೆ ಆಗಬೇಕು. ಆ ಬಗ್ಗೆ ವಿಚಾರಣೆ ಆಗುವ ಸಂದರ್ಭದಲ್ಲಿ ನಾನೂ ಕೂಡಾ ಮಾಹಿತಿಯನ್ನು ಒದಗಿಸಿಕೊಡುತ್ತೇನೆ. ಹಾಗೂ ಪ್ರಾಯಂ ಆಗಿ ನನ್ನ ಕುಟುಂಬಕ್ಕೆ ಹಾಗೂ ಇತರ ಜನರಿಗೆ ರಕ್ಷಣೆ ಸಿಗುವಂತಾಗಬೇಕು. ಆ ರೀತಿ ರಕ್ಷಣೆ ಒದಗಿಸುವ ದೃಷ್ಟಿಯಿಂದ ಕೂಡಲೇ ಆಜ್ಞೆಯನ್ನು ಹೊರಡಿಸುವುದಕ್ಕೆ ಮಾನ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೇ, ನಮ್ಮ ಕಡೆಯಿಂದ ಈ ವಿಷಯ ಈಗತಾನೇ ಹತ್ತು ನಿಮಿಷ ಗಳ ಹಿಂದೆ ನನಗೆ ಬಂತು. ಆದ್ದರಿಂದ ಈ ಬಗ್ಗೆ ಸರಿಯಾದ ಮಾಹಿತಿಯನ್ನು ತರಿಸುವುದಕ್ಕೆ ಆಗಲಿಲ್ಲ. ಮಾನ್ಯ ಸದಸ್ಯರು ತಮ್ಮ ಜೀವಕ್ಕೆ ಅಪಾಯವಿದೆಯೆಂದು ಹೇಳಿದ್ದಾರೆ. ಅವರ ಜೀವಕ್ಕೆ ಅಪಾಯ ವಾಗದಂತೆ ಯಾವ ರೀತಿ ಸರ್ಕಾರದ ಸೆಕ್ಯುರಿಟಿಯನ್ನು ಕೊಡುವುದಕ್ಕೆ ಸಾಧ್ಯವೋ ಅದನ್ನು ಕೊಡುತ್ತೇವೆ ಹಾಗೂ ಯಾರು ಯಾರು ಗೂಂಡಾತನ ಮಾಡುತ್ತಿದ್ದಾರೆ ಅವರ ಮೇಲೆ ಎನ್‌ಕ್ವೈರಿ ಮಾಡಿ ಕಾರ್ಯ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಅಲ್ಲಿನ ಅಧಿಕಾರಿಗಳಿಗೆ ಆ ವಿಷಯ ಗೊತ್ತಿದ್ದರೂ ಕೂಡ ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲ. ಅಲ್ಲಿನ ಸ್ಥಳೀಯ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡರೆ ಎಲ್ಲ ಸರಿ ಹೋಗುತ್ತದೆ. ಅವರು ಅಲ್ಲಿ ಸುಮ್ಮನೆ ಕುಳಿತಿರುತ್ತಾರೆ, ಅವರ ಬಗ್ಗೆ ಏನು ವ್ಯವಸ್ಥೆ ಮಾಡು ತ್ತೀರಿ ?

ಶ್ರೀ ಬಿ. ರಾಚಯ್ಯ.—ಅವರೂ ಶಾಮೀಲಾಗಿದ್ದು ಇಂತಹ ಅನಾಹುತ ನಡೆಯುವುದಕ್ಕೆ ಅವಕಾಶ ಕೊಟ್ಟಿದ್ದರೆ ಅವರ ಮೇಲೂ ಕ್ರಮ ಕೈಗೊಳ್ಳುತ್ತೇವೆ.

ಅಧ್ಯಕ್ಷರು.—ಈಗ ಮುಂದಿನ ವಿಷಯ.

ಶ್ರೀ ಬಸವರಾಜ್ ಹೊಗಪ್ಪ ಪಾಟೀಲ್.—ಅಧ್ಯಕ್ಷರೇ, ಕರ್ನಾಟಕದ ಸರ್ಕಾರಿ ವಿಜಾನೆಯಲ್ಲಿ ಸರ್ಕಾರಿ ನೌಕರರ ಸಂಬಳದ ಬಿಲ್‌ಗಳನ್ನು ಬಿಟ್ಟರೆ ಬೇರೆ ಯಾವುದೇ ರೀತಿಯ ಬಿಲ್‌ಗಳನ್ನು ಪಾಸ್ ಮಾಡುವುದಿಲ್ಲ, ಇದರಿಂದ ರಾಜ್ಯದ ಜನತೆಗೆ ಬಹಳ ತೊಂದರೆಯಾಗಿದೆ. ನಮ್ಮ ಭಾಗದಲ್ಲಿ ಕೆಲವ ಹರಿಜನರ ಮನೆ ಸುಟ್ಟಿದ್ದು ಆ ಬಗ್ಗೆ ಅಲ್ಲಿ ಕೇಳಲು ಹೋದರೆ ನೌಕರರ ಸಂಬಳದ ಬಿಲ್ ಬಿಟ್ಟರೆ ಬೇರ ಯಾವುದೇ ಬಿಲ್ ಪಾಸ್ ಮಾಡುವುದಿಲ್ಲವೆಂದು, ಹಾಗು ಆ ಬಗ್ಗೆ ಆದೇಶ ಇದೆ ಎಂದು ಹೇಳುತ್ತಾರೆ. ವಿದ್ಯಾರ್ಥಿಗಳ ಫೀಸ್ ಸಹಾ ಸ್ಕಾಂಕ್ಷನ್ ಆಗುತ್ತಾ ಇಲ್ಲ. ಹೀಗೇ ಆದರೆ ಮುಂದಿನ ತಿಂಗಳು ಸರ್ಕಾರಿ ನೌಕರರಿಗೆ ಸಂಬಳ ಸಿಗುವುದೇ ಇಲ್ಲವೇ ಎಂಬ ಸಂಶಯವೂ ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ಬಡ್ಜೆಟ್ ಮೇಲೆ ಚರ್ಚೆ ನಾಳೆ ಪ್ರಾರಂಭವಾಗುತ್ತದೆ. ಆಗ ಈ ವಿಷಯದ ಬಗ್ಗೆ ಚರ್ಚೆ ಮಾಡಲಿ.

ಶ್ರೀ ಬಸವರಾಜ್ ಹಳಿಗಪ್ಪ ಪಾಟೀಲ್.—ನಮ್ಮಲ್ಲಿ ಮನೆ ಸುಟ್ಟಿದ್ದು, ಅಲ್ಲಿ ಮನೆ ಕಳೆದುಕೊಂಡ ವರಿಗೆ ಹಣ ಕೊಡುವುದಕ್ಕೆ ಆಜ್ಞೆ ಮಾಡಲಿ.

ಅಧ್ಯಕ್ಷರು.—ತಾವು ಪ್ರತ್ಯೇಕವಾಗಿ ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿ ಆ ಬಗ್ಗೆ ಮಾತನಾಡಿ.

ಶ್ರೀ ಬಸವರಾಜ್ ಹಳಿಗಪ್ಪ ಪಾಟೀಲ್.—ಆ ಬಗ್ಗೆ ರಿಪೋರ್ಟ್ ತರಿಸಿ ಮಾಡುವುದಕ್ಕೆ ಆಗುವುದಿಲ್ಲವೇ ?

ಶ್ರೀ ಕೆ. ಹೆಚ್. ಪಾಟೀಲ್.—This is not the place to fix meeting with the Chief Minister. This is the matter pertaining to the interests of the State.

ಶ್ರೀ ಎಸ್. ಬಂಗಾರಪ್ಪ.—ಜನರ ಹಿತ ದೃಷ್ಟಿಯಿಂದ ಮಾನ್ಯ ಸದಸ್ಯರು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ತಾವು ಹೋಗಿ ಮಂತ್ರಿಗಳನ್ನು ಭೇಟಿ ಆಗಿ ಎಂದರೆ ಹೇಗೆ ?

ಅಧ್ಯಕ್ಷರು.—ಸುಟ್ಟುಹೋದ ಮನೆಗಳಿಗೆ ದುಡ್ಡು ಕೊಟ್ಟಿಲ್ಲ ಎಂದು ಅವರು ಹೇಳಿದರು. ಆ ವಿಷಯದ ಬಗ್ಗೆ ತಾವು ಹೋಗಿ ಮಾತನಾಡಿ ಎಂದು ನಾನು ಹೇಳಿದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ಹೇಳುವ ಹೇಳಿಕೆ ಸದನಕ್ಕೆ ಬೇಕಾಗುತ್ತದೆ. ಪ್ರೈವೇಟಾಗಿ ಹೇಳುವುದಾದರೆ.....

ಅಧ್ಯಕ್ಷರು.—ಧನಸಹಾಯದ ಬಗ್ಗೆ ಡಿಸ್‌ಕಸ್ ಮಾಡಿ ಎಂದು ನಾನು ಹೇಳಿದೆ.

ಶ್ರೀ ಎಸ್. ಬಂಗಾರಪ್ಪ.—ಅವರು ಹೇಳುವುದನ್ನು ಹೇಳಲಿ ಆಮೇಲೆ ಅವರ ಬಳಿ ಹೋಗೋಣ

SRI K. H. PATIL.–It is not a subject to be discused during budget discussion. The Chief Minister has to convince us whether the Government is stable or not.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಇಪತ್ತು ಮೂರು ಗಂಟೆಗೆ ಅದು ತಾತ್ಕಾಲಿಕವಾದ ಬಡ್ಜೆಟ್ ಆದರೂ..... ಆ ವೇಳೆ ಕೆಲವು ಸದಸ್ಯರು ಡಾಕ್ಟರ್, ಡಾಕ್ಟರ್ ಎಂದು ಕೂಗಿದರು.

(ಈ ಹಂತದಲ್ಲಿ ಹುಕ್ಕೇರಿ ಕ್ಷೇತ್ರದ ಜನತಾ ಶಾಸಕರಾದ ಶ್ರೀಮಾನ್ ವಿ.ಎಂ. ಕಟ್ಟಿಯವರು ಕುಳಿತಿದ್ದ ತಮ್ಮ ಸ್ಥಾನದಿಂದ ಕುಸಿದುಬಿದ್ದರು. ಆಗ ಸಭೆಯಲ್ಲಿದ್ದ ಕೆಲವು ಸದಸ್ಯರು ಅವರ ಬಳಿ ಧಾವಿಸಿದರು.)

ಅಧ್ಯಕ್ಷರು.—ಈಗ ಸದನವನ್ನು ೧೦ ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸಭೆಯು ೧೦ ಗಂಟೆ ೧೪ ನಿಮಿಷಕ್ಕೆ ಮುಂದೂಡಲ್ಪಟ್ಟಿತು.)

(ಸಭೆಯು ಪುನಃ ೧೧-೦೦ ಗಂಟೆಗೆ ಸಮಾವೇಶಗೊಂಡಿತು)

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಸಂತಾಪ ಸೂಚನೆ

ಅಧ್ಯಕ್ಷರು.—ಹುಕ್ಕೇರಿ ಕ್ಷೇತ್ರದ ಶಾಸಕರಾದ ಶ್ರೀ ವಿಶ್ವನಾಥ್ ಮಲ್ಲಪ್ಪ ಕಟ್ಟಿಯವರು ನಿಧನರಾದರೆಂದು ತಿಳಿಸಲು ತುಂಬಾ ವಿಷಾದವಾಗುತ್ತದೆ.

ಮಾನ್ಯ ಸದಸ್ಯರು ಹುಕ್ಕೇರಿ ಕ್ಷೇತ್ರದಿಂದ ಪ್ರಥಮ ಬಾರಿಗೆ ಈ ಸದನಕ್ಕೆ ಆಯ್ಕೆಯಾಗಿದ್ದರು. ಅವರು ಹಲವಾರು ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದರು.